



# ಹೊಸ ಶಿಕ್ಷಣ ನೀತಿ : ಭಾಷೆ - ಸಾಹಿತ್ಯ- ಸವಾಲುಗಳು

- ಡಾ. ಎಚ್. ಬಿ. ಕೋಲ್ಕಾರ



# ಹೊಸ ಶಿಕ್ಷಣ ನೀತಿ :
# ಭಾಷೆ-ಸಾಹಿತ್ಯ-ಸವಾಲುಗಳು

(ರಾಷ್ಟ್ರೀಯ ವಿಚಾರ ಸಂಕಿರಣದ ಲೇಖನಗಳು)

ಸಂಪಾದಕರು

ಡಾ. ಎಚ್.ಬಿ. ಕೋಲ್ಕಾರ

ಪ್ರಕಾಶಕರು

ಶುಭಂ ಪಬ್ಲಿಕೇಶನ್
ಕಾನಪೂರ-208021 (ಉತ್ತರ ಪ್ರದೇಶ)
ಪ್ರಾಚಾರ್ಯರು
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ
ಮಹಾವಿದ್ಯಾಲಯ, ಬೆಳಗಾವಿ.

2022

**HOSA SHIKSHANA NEETI: BHASHE-SAHITYA-SAVALUGALU** (RASTHRIYA VICHARA SAMKIRANADA LEKHANAGALU)

Editors : **Dr. H.B. Kolkar,** Associate Professor, Rani Parvati Devi Arts and Commerce College, Belagavi. Mobile: 9481562481.Published by: **Shubham Publication,** 3 A/128, Hanspuram Naubasta, KANAPUR NAGAR PIN : 208021 (U.P.) EMail: shubhampublicationskanpur@gmail.com. Contact: 9452971407, 9792402100. and **Dr. Shoba Naik,** Principal, Rani Parvati Devi Arts and Commerce College, Belagavi. ©: Reserved, First Impression: April, 2022, Pages: X+89=99, Price: 100/- Paper Used: 70 gsm, Copies: 500, Layout: Dr. Savakar S. Kamble.

**ISBN: 978-93-92417-22-1**

**ಹೊಸ ಶಿಕ್ಷಣ ನೀತಿ : ಭಾಷೆ–ಸಾಹಿತ್ಯ–ಸವಾಲುಗಳು**

**ಸಂಪಾದಕರು:** **ಡಾ. ಎಚ್. ಬಿ. ಕೋಲ್ಕಾರ**
ಸಹ ಪ್ರಾಧ್ಯಾಪಕರು
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಬೆಳಗಾವಿ.

**ಪ್ರಕಾಶಕರು:** **ಶುಭಂ ಪಬ್ಲಿಕೇಶನ್**
೩ಎ/೧೨೮, ಹಂಸಪುರಂ ನೌಬಸ್ತಾ, ಕಾನಪುರ ನಗರ–
೨೦೮೦೨೧ (ಉತ್ತರ ಪ್ರದೇಶ)
**ಡಾ. ಶೋಭಾ ನಾಯಿಕ**
ಪ್ರಾಚಾರ್ಯರು
ರಾಣಿ ಪಾರ್ವತಿದೇವಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಬೆಳಗಾವಿ.

©: ಕಾಯ್ದಿರಿಸಿದೆ

ಪ್ರಥಮ ಮುದ್ರಣ: ಎಪ್ರಿಲ್, ೨೦೨೨
ಪ್ರತಿಗಳು: ೫೦೦
ಪುಟಗಳು: X+೮೯=೯೯
ಬೆಲೆ: ೧೦೦/–
ಪುಟ ವಿನ್ಯಾಸ: **ಡಾ. ಸಾವುಕಾರ ಎಸ್. ಕಾಂಬಳೆ**

*

# ಪರಿವಿಡಿ


೧. ನಾಲ್ಕು ವರ್ಷಗಳ ಬಿ.ಇಡಿ(ಎನ್.ಇ.ಪಿ) ಪದವಿ ಶಿಕ್ಷಣದ ಸಾಧ್ಯತೆ ಮತ್ತು ಸವಾಲುಗಳು

- ಡಾ. ಹೊಂಬಯ್ಯ ಹೊನ್ನಲಗೆರೆ / ೧

೨. ಕನ್ನಡ ಭಾಷೆ ಎದುರಿಸುತ್ತಿರುವ ಸವಾಲುಗಳು

- ಡಾ. ಸಾವುಕಾರ ಎಸ್. ಕಾಂಬಳೆ / ೮

೩. ಪಾರಂಪರಿಕ ಜ್ಞಾನ ಶಿಸ್ತುಗಳೊಂದಿಗೆ ಹೊಸ ಅಧ್ಯಯನ ವಿಧಾನ ಮತ್ತು ಪಠ್ಯಕ್ರಮ

- ಅಮೃತಾ ಈರಣ್ಣಾ ಉಗಾರೆ / ೧೨

೪. ಕನ್ನಡ ಮೌಖಿಕ ಪರಂಪರೆಯ ತತ್ವಪದ ಸಾಹಿತ್ಯ

- ಡಾ. ಪ್ರಕಾಶ ಗ. ಖಾಡೆ / ೧೫

೫. ಮಿರ್ಜಿ ಅಣ್ಣಾರಾಯರ ಅನುವಾದದ ವಿಧಾನ ಮತ್ತು ವಿಶೇಷತೆ

- ಡಾ. ಎಚ್.ಬಿ. ಕೋಲ್ಕಾರ / ೨೧

೬. ವರ್ಚುವಲ್ ಮಾಧ್ಯಮದ ಗುಣಗಳು ಮತ್ತು ಅವಗುಣಗಳು

- ಪ್ರೊ. ಆಯ್ ಪಿ. ಹೋಳಕರ / ೨೭

೭ ಕನ್ನಡ ಕಾವ್ಯದ ಕಣ್ಣಲ್ಲಿ ಡಾ. ಸಿದ್ಧಲಿಂಗಯ್ಯ

- ಡಾ. ಸದಾಶಿವ ದೊಡಮನಿ / ೩೨

೮. ಶಾಸನಗಳಲ್ಲಿ ಜೀವನ ಮೌಲ್ಯಗಳು

- ಡಾ. ಆನಂದಕುಮಾರ ಎಂ. ಜಕ್ಕಣ್ಣನವರ / ೩೮

೯. ವಚನ ಸಾಹಿತ್ಯ ಮತ್ತು ದಾಂಪತ್ಯ ಜೀವನ

- ಡಾ. ಪ್ರಕಾಶ ಎನ್ ನರಗುಂದ / ೪೯

೧೦. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅಗತ್ಯತೆ ಮತ್ತು ಪ್ರಸ್ತುತತೆ-ಒಂದು ಅವಲೋಕನ

- ಡಾ. ಸುನಂದಾ ಎಂ. ಕಾಳಾಯಿ / ೬೭

೧೧. ಮೊಗಸಾಲೆಯವರ ಕಾವ್ಯದಲ್ಲಿ ಸ್ತ್ರೀಪರ ಕಾಳಜಿ

- ಪ್ರೊ. ಎಚ್.ಬಿ. ಕೋಲ್ಕಾರ / ೭೫

೧೨.ಉನ್ನತ ಶಿಕ್ಷಣದಲ್ಲಿ ಭಾರತೀಯ ಭಾಷೆಗಳ ಸ್ಥಿತಿಗತಿ

- ಶ್ವೇತಾ ಕ. ಹಂದಿಗೋಳ / ೮೪

# ೬. ವರ್ಚುವಲ್ ಮಾಧ್ಯಮದ ಗುಣಗಳು ಮತ್ತು ಅವಗುಣಗಳು

❖

ಪ್ರೊ. ಆಯ್ ಪಿ. ಹೋಳಕರ

ಪರಿವರ್ತನೆ ಎಂಬುವುದು ಪ್ರಕೃತಿಯ ನಿಯಮ. ಪರಿವರ್ತನೆಗೆ ಪ್ರತಿಯೊಬ್ಬರು ಹೊಂದಿಕೊಳ್ಳಬೇಕು. ಅದೇ ರೀತಿ ವ್ಯವಸ್ಥೆಯಲ್ಲೂ ದಿನದಿಂದ ದಿನಕ್ಕೆ ಎಷ್ಟೋ ಪರಿವರ್ತನೆಗಳನ್ನು ಕಾಣುತ್ತೇವೆ. ಅಂತಹ ಒಂದು ಮಹತ್ವಪೂರ್ಣ ಪರಿವರ್ತನೆಯನ್ನು ನಾವು ಶಿಕ್ಷಣ ಕ್ಷೇತ್ರದಲ್ಲಿ ಕಂಡಿದ್ದೇವೆ. ಅದೇ "ರಾಷ್ಟ್ರೀಯ ಶಿಕ್ಷಣ ನೀತಿ–೨೦೨೦". ಈ ಶಿಕ್ಷಣ ನೀತಿಯ ಮುಖ್ಯ ಉದ್ದೇಶ ಕೌಶಲ್ಯಾಧಾರಿತ ಶಿಕ್ಷಣವನ್ನು ನೀಡುವುದು. ಈ ರೀತಿಯ ಶಿಕ್ಷಣವನ್ನು ನೀಡಲು ಪೂರ್ವ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ನೀಡಬೇಕು ಎಂಬುವುದರ ಮೇಲೆ ಹೊಸ ಶಿಕ್ಷಣ ನೀತಿ ಬೆಳಕನ್ನು ಚೆಲ್ಲುತ್ತದೆ. ಹಾಗೂ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಯಾವ ರೀತಿ ತಂತ್ರಜ್ಞಾನವನ್ನು ಬೋಧನಾ–ಕಲಿಕಾ ಪ್ರಕ್ರಿಯೆಗೆ ಅಳವಡಿಸಿಕೊಳ್ಳಬಹುದು ಎಂಬುವುದರ ಕುರಿತು ತಿಳಿಸುತ್ತದೆ. ಅಷ್ಟೇ ಅಲ್ಲದೆ ತಂತ್ರಜ್ಞಾನದ ಕುರಿತು ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಅನಿವಾರ್ಯತೆಯನ್ನು ಒತ್ತಿ ಹೇಳುತ್ತದೆ.

ಕಳೆದ ೨–೩ ವರ್ಷಗಳಿಂದ ಇಡೀ ಜಗತ್ತೆಲ್ಲ "ಕೋವಿಡ್–೧೯" ಮಹಾಮಾರಿಯಿಂದ ತತ್ತರಿಸಿ ಹೋಗಿದೆ. ಮಾನವ ತನ್ನ ಎಲ್ಲ ಕಾರ್ಯ ಚಟುವಟಿಕೆಗಳನ್ನು ನಿಲ್ಲಿಸಿ ಮನೆಯಲ್ಲಿ ಅಡಗಿ ಕುಳಿತ ದಿನಗಳು ಈಗಷ್ಟೇ ಇಲ್ಲವಾಗಿವೆ. ಇಂತಹ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಕೆಲವು ಹೊಸ ಮಾಧ್ಯಮಗಳ ಮುಖಾಂತರ ಶಿಕ್ಷಕರು ಮಕ್ಕಳಿಗೆ ಬೋಧನೆ ಮಾಡಿದ್ದಾರೆ. ಅದು ಅನಿವಾರ್ಯವೂ ಕೂಡ ಆಗಿತ್ತು. ಆ ಸಂದರ್ಭದಲ್ಲಿ ಅಂತರ್ಜಾಲ ಆಧಾರಿತ ಬೋಧನೆ ಅನೂಕೂಲವೋ ಅನಾನುಕೂಲವೋ ಎಂಬುವುದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ತೊಡಗಿಸಿ

ನಿರಂತರತೆಯನ್ನು ಕಾಯ್ದುಕೊಳ್ಳುವುದು ಮುಖ್ಯ ಉದ್ದೇಶವಾಗಿತ್ತು. ಯಾವುದೇ ಒಂದು ವಸ್ತು, ವಿಷಯ, ವ್ಯವಸ್ಥೆ, ಸಂಗತಿ ಹೀಗೆ ಪ್ರತಿಯೊಂದಕ್ಕೂ ಗುಣ–ಅವಗುಣಗಳೂ ಇದ್ದೇ ಇರುತ್ತವೆ. ನಾವು ಅವುಗಳನ್ನು ತೂಗಿ ನೋಡಿ ಯಾವುದು ಉಪಯುಕ್ತವಾಗಿದೆಯೋ ಅದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

ನಮ್ಮ ದೇಶ ಅಭಿವೃದ್ಧಿ ಹೊಂದುತ್ತಿರುವ ದೇಶ. ಪ್ರತಿಯಂದು ಕ್ಷೇತ್ರದಲ್ಲಿ ದಿನೇ ದಿನೇ ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ. ತಂತ್ರಜ್ಞಾನದ ಬಳಕೆಯಲ್ಲಂತೂ ತುಂಬಾ ವೇಗವಾಗಿ ಬೆಳವಣಿಗೆ ಹೊಂದುತ್ತಿದೆ. ಶಿಕ್ಷಣ, ವ್ಯಾಪಾರ, ಆರ್ಥಿಕ, ಸಾಮಾಜಿಕ, ರಾಜಕೀಯ ಮೊದಲಾದ ಕ್ಷೇತ್ರಗಳಲ್ಲಿ ಪರಿವರ್ತನೆಯನ್ನು ಕಾಣುತ್ತಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಂತೂ ಅಪಾರ ಪರಿವರ್ತನೆ ನಡೆಯುತ್ತಿದೆ ಎಂಬುವುದಕ್ಕೆ ಪ್ರಸ್ತುತ ದಿನಗಳೇ ಸಾಕ್ಷಿ. ಶೈಕ್ಷಣಿಕ ವಲಯದಲ್ಲಿ ಇತ್ತೀಚಿಗೆ ಪದೇ ಪದೇ ಕೇಳುತ್ತಿರುವ ಧ್ವನಿ ಎಂದರೆ ಅದು ಅಂತರ್ಜಾಲ ಆಧಾರಿತ ತರಗತಿ(ಆನ್ಲೈನ್ ಕ್ಲಾಸ್). ರಾಷ್ಟ್ರೀಯ ಶಿಕ್ಷಣ ನೀತಿ–೨೦೨೦ ಭವಿಷ್ಯದಲ್ಲಿಯೂ ಕೂಡಾ ಈ ಅಂತರ್ಜಾಲ ಆಧಾರಿತ ಬೋಧನಾ–ಕಲಿಕಾ ಪ್ರಕ್ರಿಯೆಯನ್ನು ಮುಂದುವರೆಸುವ ಯೋಜನೆಯನ್ನು ಇಟ್ಟುಕೊಂಡಿದ್ದರಿಂದ ಇದರ ಸಾಧಕ–ಬಾಧಕಗಳ ಬಗ್ಗೆ ತಿಳಿದುಕೊಳ್ಳುವುದು ಅನಿವಾರ್ಯವಾಗಿದೆ.

**ವರ್ಚುವಲ್ ಶಬ್ದ ವ್ಯುತ್ಪತ್ತಿ:**

ಅಂತರ್ಜಾಲ ಆಧಾರಿತ ಮಾಹಿತಿಯ ಪ್ರಕಾರ ಮೊಟ್ಟ ಮೊದಲ ಬಾರಿಗೆ ಈ ಶಬ್ದವನ್ನು ೧೯೩೮ ರಲ್ಲಿ ಫ್ರೆಂಚ್ ಅವಂತಿ ಗಾರ್ಡ ನಾಟಕಕಾರ ಹಾಗೂ ಆಂಟೋನಿನ್ ಆರ್ಟೌಡ್ ಅವರು ರಂಗಭೂಮಿಯಲ್ಲಿನ ಪಾತ್ರ ಮತ್ತು ಭೌತಿಕ ವಸ್ತುಗಳ ಪ್ರಚೋದಕ ಸ್ವಭಾವವನ್ನು "ಲಾ ರೀಲಿಯಟ್ ವರ್ಚುವಲ್" ಎಂದು ಪ್ರಬಂಧ ಸಂಗ್ರಹ ಪುಸ್ತಕದಲ್ಲಿ ವಿವರಿಸಿದ್ದಾರೆ. ಈ ಪುಸ್ತಕವು ೧೯೫೮ ರಲ್ಲಿ ಪ್ರಕಟವಾಯಿತು. ರೀಲಿಯಟ್ ವರ್ಚುವಲ್ ಮುಂದೆ ವರ್ಚುವಲ್ ರಿಯಾಲಿಟಿ ಎಂಬ ಪರಿಭಾಷೆಯನ್ನು ಪಡೆದುಕೊಂಡಿತು.

**ವರ್ಚುವಲ್ ಮಾಧ್ಯಮ:**

ಇತ್ತೀಚಿನ ದಿನಗಳು ಅಂತರ್ಜಾಲ ಆಧಾರಿತ ಬೋಧನೆ–ಕಲಿಕೆ ಅನಿವಾರ್ಯತೆಯನ್ನು ತಂದೊಡ್ಡಿದ್ದು ಇದರ ನಿರ್ವಹಣೆಗಾಗಿ ಕೆಲ ಹೊಸ ಮಾಧ್ಯಮಗಳನ್ನು ಬಳಸುತ್ತಿದ್ದೇವೆ. ಉದಾಹರಣೆಗಾಗಿ ಕಂಪ್ಯೂಟರ ಅನಿಮೇಷನ್‌ಗಳು, ಕಂಪ್ಯೂಟರ ಆಟಗಳು, ಮಾನವ – ಕಂಪ್ಯೂಟರ ಆಟಗಳು,

ಮಾನವ– ಕಂಪ್ಯೂಟರ ಇಂಟರ್‌ಫೇಸ್‌ಗಳು, ವೆಬ್‌ಸೈಟಗಳು ಮತ್ತು ವರ್ಚುವಲ್ ಜಗತ್ತು.

**ವರ್ಚುವಲ್ ಮಾಧ್ಯಮದ ಅರ್ಥ:**

ನಿಜವಾದ ವಾತಾವರಣಕ್ಕೆ ಅತ್ಯಂತ ಸಮೀಪವಾದ ವಾತಾವರಣವನ್ನು ಗಣಕಯಂತ್ರದ ಮೂಲಕ ಒದಗಿಸುವ ಒಂದು ತಂತ್ರಜ್ಞಾನ.

ಸಾಂಪ್ರದಾಯಿಕ ಬೋಧನೆಗೂ ಮತ್ತು ವರ್ಚುವಲ್ ತರಗತಿಗೂ ಇರುವ ವ್ಯತ್ಯಾಸಗಳು:

ಸಾಂಪ್ರದಾಯಿಕ ಬೋಧನೆಯಲ್ಲಿ ವಿದ್ಯಾರ್ಥಿಗಳು ಭೌತಿಕವಾಗಿ ತರಗತಿಗೆ ಹಾಜರ ಆಗುತ್ತಾರೆ. ಮುಖಾ ಮುಖಿ ಕಲಿಕೆ ಇರುವುದರಿಂದ ಶಿಕ್ಷಕ–ವಿದ್ಯಾರ್ಥಿ ಸಂಬಂಧ ಉತ್ತಮವಾಗಿರುತ್ತದೆ. ಇಲ್ಲಿ ನಿರ್ದಿಷ್ಠ ಪಠ್ಯಕ್ರಮವನ್ನು ನಿರ್ದಿಷ್ಠ ಸಮಯದಲ್ಲಿ, ನಿರ್ದಿಷ್ಠ ಸ್ಥಳದಲ್ಲಿ, ನಿರ್ದಿಷ್ಠ ಶಿಕ್ಷಕರು ಬೋಧಿಸಬೇಕಾಗುತ್ತದೆ. ಪಠ್ಯಕ್ರಮದ ಜೊತೆಗೆ ಇತರ ಪಠ್ಯೇತರ ಚಟುವಟಿಕೆಗಳನ್ನು ಕಲಿಸಲಾಗುತ್ತದೆ. ಬೋಧನೆಗೆ ಹೆಚ್ಚು ಸಮಯ ಬೇಕಾಗುತ್ತದೆ.

ವರ್ಚುವಲ್ ಬೋಧನೆಯಲ್ಲಿ ವಿದ್ಯಾರ್ಥಿಗಳು ಭೌತಿಕವಾಗಿ ತರಗತಿಗೆ ಹಾಜರ ಆಗುವ ಅವಶ್ಯಕತೆ ಇರುವುದಿಲ್ಲ. ಮುಖಾ ಮುಖಿ ಕಲಿಕೆ ಇರುವುದಿಲ್ಲ ಆದ್ದರಿಂದ ಶಿಕ್ಷಕ–ವಿದ್ಯಾರ್ಥಿಗಳ ನಡುವೆ ಯಾವುದೇ ರೀತಿಯ ಭಾವನಾತ್ಮಕ ಸಂಬಂಧ ಇರುವುದಿಲ್ಲ. ಇಲ್ಲಿ ನಿರ್ದಿಷ್ಠ ಪಠ್ಯಕ್ರಮವಿರುತ್ತದೆ ಆದರೆ ನಿರ್ದಿಷ್ಠ ಸಮಯ ಪಾಲಿಸುವ ಅಗತ್ಯವಿಲ್ಲ. ತಮಗೆ ಅನುಕೂಲವಾದ ಸಮಯದಲ್ಲಿ ತರಗತಿಗೆ ಮಾಧ್ಯಮದ ಮುಖಾಂತರ ಹಾಜರ ಆಗಬಹುದು. ಪಠ್ಯಕ್ರಮದ ಜೊತೆಗೆ ಇತರ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗಲು ಸಾಧ್ಯವಾಗುವುದಿಲ್ಲ. ಬೋಧನೆಯಲ್ಲಿ ಸ್ವಲ್ಪ ಸಮಯ ಉಳಿತಾಯವಾಗುತ್ತದೆ.

**ವರ್ಚುವಲ್ ಮಾಧ್ಯಮದ ಗುಣಗಳು:**

ಸಮಯ ಉಳಿತಾಯವಾಗುತ್ತದೆ ಹೇಗೆಂದರೆ ಕೆಲವು ವಿಷಯಗಳಲ್ಲಿ ಚಿತ್ರ ಬಿಡಿಸುವ ಅನಿವಾರ್ಯತೆ ಒದಗಿದಾಗ ವರ್ಚುವಲ್ ಮಾಧ್ಯಮ ಉಪಯೋಗಿಸಿಕೊಂಡರೆ ಸಮಯ ಉಳಿತಾಯವಾಗುತ್ತದೆ. ನಮಗೆ ಅನುಕೂಲವಾದ ಸಮಯದಲ್ಲಿ ಇದನ್ನು ಉಪಯೋಗಿಸಬಹುದು. ಆರ್ಥಿಕ ತೊಂದರೆ ಇರುವವರಿಗೆ ನೌಕರಿ ಮಾಡುವುದು ಅನಿವಾರ್ಯವಾಗಿರುತ್ತದೆ ಅಂತಹ ಸಂದರ್ಭದಲ್ಲಿ ಈ ಮಾಧ್ಯಮದ ಮುಖಾಂತರ ನೌಕರಿ ಮಾಡುತ್ತಾ ಕಲಿಯಬಹುದು.

ಕಾರಣಾಂತರಗಳಿಂದ ಭೌತಿಕವಾಗಿ ಹಾಜರ ಆಗಲು ಸಾಧ್ಯವಾಗದವರಿಗೆ ತುಂಬಾ ಅನುಕೂಲವಾಗುತ್ತದೆ. ಓದಿಗೆ ಸಂಬಂಧಪಟ್ಟಂತೆ ವೆಬ್‌ಸೈಟಗಳನ್ನು ಅಭಿವೃದ್ಧಿಪಡಿಸಲಾಗಿದೆ. ನಿಜವಾದ ತರಗತಿಗೆ ತುಂಬಾ ಸಮೀಪವಾದ ವಾತಾವರಣವನ್ನು ಕಲ್ಪಿಸಿಕೊಡುತ್ತದೆ.

**ವರ್ಚುವಲ್ ಮಾಧ್ಯಮದ ಅವಗುಣಗಳು:**

ಮುಖಾ ಮುಖಿ ಭೇಟಿ ಇಲ್ಲದಿರುವುದರಿಂದ ಶಿಕ್ಷಕ–ವಿದ್ಯಾರ್ಥಿ ನಡುವೆ ಯಾವುದೇ ರೀತಿಯ ಭಾವನಾತ್ಮಕ ಸಂಬಂಧ ಇರುವುದಿಲ್ಲ. ಮಾಧ್ಯಮದ ಬಳಕೆ ಎಲ್ಲರಿಗೂ ಗೊತ್ತಿರುವುದಿಲ್ಲ. ನೆಟ್‌ವರ್ಕ್ ಸಮಸ್ಯೆಯಾಗುತ್ತದೆ. ವಿದ್ಯುತ್ ಕಡಿತವಾದಾಗ ಬಳಕೆ ಮಾಡಲು ಸಾಧ್ಯವಾಗುವುದಿಲ್ಲ. ಮಾಧ್ಯಮ ಕೊಂಡುಕೊಳ್ಳಲು ಹಣಕಾಸಿನ ಕೊರತೆ. ವಿದ್ಯಾರ್ಥಿಗಳು ದುರ್ಬಳಕೆ ಮಾಡಿಕೊಳ್ಳಬಹುದು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತದೆ. ನಿರಂತರ ಬಳಕೆಯಿಂದ ಹೃದಯದೊತ್ತಡ, ಅಧಿಕ ರಕ್ತದೊತ್ತಡ, ಕಣ್ಣು ಮಂಜಾಗುವುದು, ಕಿವಿ ಕೇಳದಿರುವುದು, ಮೆದುಳಿನ ಮೇಲೆ ಪರಿಣಾಮ ಹೀಗೆ ನಾನಾ ರೀತಿಯ ಆರೋಗ್ಯದ ಸಮಸ್ಯೆಗಳು ಉದ್ಭವವಾಗುತ್ತವೆ.

ಏನೇ ಆಗಲಿ ಶಿಕ್ಷಣ ಕ್ಷೇತ್ರದಲ್ಲಿ ವರ್ಚುವಲ್ ಮಾಧ್ಯಮದ ಬಳಕೆಯನ್ನು ಅಲ್ಲಗಳೆಯುವಂತಿಲ್ಲ. ಅದಕ್ಕೆ ಕೇಂದ್ರ ಸರ್ಕಾರ "ರಾಷ್ಟ್ರೀಯ ಶಿಕ್ಷಣ ನೀತಿ–೨೦೨೦" ಇದರಲ್ಲಿ ಶಿಕ್ಷಕ–ವಿದ್ಯಾರ್ಥಿಗಳಿಗೆ ವರ್ಚುವಲ್ ಮಾಧ್ಯಮದ ಬಳಕೆಯ ಕುರಿತು ತರಬೇತಿ ನೀಡಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಬೋಧನೆ–ಕಲಿಕೆಗೆ ಸಂಬಂಧಪಟ್ಟಂತೆ ಎಲ್ಲ ಕೆಲಸ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ದೀಕ್ಷಾ, ಸ್ವಯಂ, ಸ್ವಯಂಪ್ರಭಾ ಮೊದಲಾದ ಶೈಕ್ಷಣಿಕ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹಾಗೂ ಈ ಶೈಕ್ಷಣಿಕ ತಂತ್ರಾಂಶಗಳು ಶಿಕ್ಷಕ–ವಿದ್ಯಾರ್ಥಿಗಳಿಗೆ ಎಲ್ಲಾ ಹಂತಗಳಲ್ಲಿ ದೊರೆಯುವಂತೆ ಮಾಡಲಾಗುವ ಉದ್ದೇಶವನ್ನು ಹೊಂದಿದೆ. ಮುಂಬರುವ ದಿನಗಳಲ್ಲಿ ಈ ತಂತ್ರಾಂಶಗಳು ಭಾರತದ ಎಲ್ಲ ಭಾಷೆಗಳಲ್ಲಿ ಲಭ್ಯವಿರಲಿದೆ. ಇ– ಕಂಟೆಂಟ್‌ನ ಬೋಧನೆ – ಕಲಿಕೆಯನ್ನು ಎಲ್ಲ ರಾಜ್ಯಗಳು ಪ್ರಾದೇಶಿಕ ಭಾಷೆಗಳಲ್ಲಿ ಅಭಿವೃದ್ಧಿಪಡಿಸುವ ಕಾರ್ಯ ಮುಂದುವರೆಯಲಿದೆ. ಇದನ್ನು ಎನ್.ಇ.ಟಿ.ಎಫ್, ಸಿ.ಆಯ್.ಇ.ಟಿ, ಸಿ.ಬಿ.ಎಸ್.ಇ, ಎನ್.ಆಯ್.ಓ.ಎಸ್ ಹಾಗೂ ಇತರ ಸಂಸ್ಥೆಗಳು ಕಾರ್ಯನಿರ್ವಹಿಸಲಿವೆ.

ಡಿಜಿಟಲ್ ತಂತ್ರಜ್ಞಾನ ಒಡ್ಡಿರುವ ತುರ್ತು ಅಗತ್ಯ ಹಾಗೂ ಶಾಲಾ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗಿನ ಎಲ್ಲ ಹಂತಗಳಲ್ಲಿ ಬೋಧನೆ–ಕಲಿಕೆಗೆ ತಂತ್ರಜ್ಞಾನವನ್ನು

ಅಳವಡಿಸಿಕೊಳ್ಳುವ ತುರ್ತು ಅಗತ್ಯವನ್ನು ಮನಗಂಡು ರಾಷ್ಟ್ರೀಯ ಶಿಕ್ಷಣ ನೀತಿ–೨೦೨೦ ಕೆಲವೊಂದು ಉಪಕ್ರಮಗಳನ್ನು ಶಿಫಾರಸು ಮಾಡಿದೆ.ಅವುಗಳು,,,,

೧. ಆನ್‌ಲೈನ್ ಮಾರ್ಗದರ್ಶಿ ಅಧ್ಯಯನಕ್ಕೆ ಯೋಜನೆ ಹಾಕಿಕೊಂಡಿದೆ.
೨. ಡಿಜಿಟಲ್‌ಗೆ ತಕ್ಕಂತೆ ಮೂಲ ಸೌಕರ್ಯಗಳನ್ನು ಹೊಂದಿಸಿಕೊಳ್ಳುವ ಗುರಿ ಇಟ್ಟುಕೊಂಡಿದೆ.
೩. ಆನ್‌ಲೈನ್ ಬೋಧನಾ ವೇದಿಕೆ ಮತ್ತು ಸಾಧನೆಗೆ ಯೋಜನೆ.
೪. ವಿಷಯ ವಿಭಜನೆ, ಡಿಜಿಟಲ್ ಭಂಡಾರ ಮತ್ತು ಪ್ರಸರಣಕ್ಕೆ ಯೋಜನೆ ಹಾಕಿಕೊಂಡಿದೆ.
೫. ಡಿಜಿಟಲ್ ವಿಭಜನೆ ನಿಭಾಯಿಸುವ ಗುರಿ.
೬. ವರ್ಚುವಲ್ ಲ್ಯಾಬ್‌ಗೆ ಅವಕಾಶ.
೭. ಶಿಕ್ಷಕರಿಗೆ ತರಬೇತಿ ನೀಡುವ ಉದ್ದೇಶ ಹೊಂದಿದೆ.
೮. ಆನ್‌ಲೈನ್ ಮೌಲ್ಯಮಾಪನ ಹಾಗೂ ಪರೀಕ್ಷೆ ಕುರಿತು ಚಿಂತನೆ.
೯. ಕಲಿಕಾ ಮಾದರಿಗಳನ್ನು ಮಿಶ್ರಣ ಮಾಡಿ ಕಲಿಸುವ ಉದ್ದೇಶ ಹೊಂದಿದೆ.
೧೦. ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಕೆಲವೊಂದು ಮಾನದಂಡ ವಿಧಿಸುವ ಯೋಜನೆ ಹಾಕಿಕೊಂಡಿದೆ.

ಸರ್ಕಾರ ಹಾಕಿಕೊಂಡ ಈ ಮೇಲಿನ ಎಲ್ಲ ಉಪಕ್ರಮಗಳ ಜೊತೆಗೆ ನಾವೂ ಕೂಡ ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಹೋಗಬೇಕಾಗಿದೆ. ಹೀಗಾದಾಗ ಮಾತ್ರ ರಾಷ್ಟ್ರೀಯ ಶಿಕ್ಷಣ ನೀತಿ–೨೦೨೦ ಯೋಜನೆಗಳು ಸಫಲವಾಗಲಿವೆ ಹಾಗೂ ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ವರ್ಚುವಲ್ ಮಾಧ್ಯಮದ ಅಳವಡಿಕೆ ಸಾಕಾರಗೊಳ್ಳಲಿದೆ.

■■